# ಮತ್ತೆ ಶ್ರಾವಣ ಬಂತು!

ಪ್ರತಿ ವರ್ಷದಂತೆ ಈ ವರ್ಷವೂ ಶ್ರಾವಣ ಬಂದಿದೆ. ಆದರೆ ಅದು ತನ್ನೊಂದಿಗೆ ತನ್ನ ಸಹಜ ವೈಭವವನ್ನು ಹೊತ್ತು ತಂದಿಲ್ಲವೆನ್ನಿಸುತ್ತಿದೆ. ಮೋಡ ಮುಸುಕಿದ್ದರೂ ಮಳೆ ಸುರಿಸದ ಆಕಾಶದತ್ತಲೇ ದಿಟ್ಟಿಯಿಟ್ಟಿರುವ ಮಣ್ಣಿನ ಮಕ್ಕಳು– 'ಬಾರೋ, ಬಾರೋ ಮಳೆರಾಯ... ಬತ್ತದ ಗದ್ದೆಗೆ ನೀರಿಲ್ಲ' ಎಂದು ಆರ್ತರಾಗಿ ಪ್ರಾರ್ಥಿಸುತ್ತಿದ್ದಾರೆ. ಯಾವ ಕಾರಣದಿಂದಲೋ ತಾಯಿ ಪ್ರಕೃತಿ ನಮ್ಮ ನಾಡಿನ ಮೇಲೆ ಮುನಿಸಿಕೊಂಡಿರುವಂತಿದೆ. ಆಕೆ ತನ್ನ ಕರುಣೆಯ ಕಣ್ಣು ತೆರೆದು, ಶ್ರಾವಣ ತನ್ನೆಲ್ಲ ವೈಭವದಿಂದ ವಿಜೃಂಭಿಸುವ ಕಾಲ ಬಂದೀತೆಂಬ ನಿರೀಕ್ಷೆಯೊಂದೇ ನಮಗಿರುವ ಆಲಂಬನ.

ಕನ್ನಡ ಕಾವ್ಯ ಪ್ರಿಯರಿಗೆ 'ಶ್ರಾವಣ'ವೆಂದೊಡನೇ ಥಟ್ಟನೆ ನೆನಪಾಗುವುದು ಕವಿ ಬೇಂದ್ರೆಯವರ ಶ್ರಾವಣ ಪ್ರೀತಿ. ಶ್ರಾವಣದ ವರ್ಣ, ನಾದ, ರಸ, ಸ್ಪರ್ಶ– ಇತ್ಯಾದಿ ಮುಖಗಳನ್ನು ಬೇಂದ್ರೆಯವರಷ್ಟು ಅನುಭವಿಸಿ, ಅಭಿವ್ಯಕ್ತಿಸಿದ ಇನ್ನೊಬ್ಬ ಕವಿ ಕನ್ನಡದಲ್ಲಿಲ್ಲವೆನ್ನಬಹುದು. ಬೇಂದ್ರೆಯವರೇ ಒಂದು ಕಡೆ 'ಶ್ರಾವಣಕ... ಹುಚ್ಚ ಆಗ್ಯಾನ... ಅಂಬಿಕಾತನಯದತ್ತಾ' ಎಂದು ಸ್ಪಷ್ಟವಾಗಿಯೇ ಹೇಳಿದ್ದಾರೆ. ಮೂಲತಃ ಬೇಂದ್ರೆಯವರು ನೀರಿನ ಆರಾಧಕರು, 'ಮಳೆ ಬರುವ ಕಾಲಕ್ಕ... ಒಳಗ್ಯಾಕ ನಿಂತೀದಿ? ಇಳೆಯೊಡನೆ ಜಳಕ ಮಾಡೋಣ; ನಾವೂನು ಮೋಡಗಳ ಕೂಡ ಆಡೋಣ' ಎಂದು ಕರೆ ಕೊಟ್ಟವರು ಬೇಂದ್ರೆ. ಇಂಥ ಮಳೆಯನ್ನು ಸಮೃದ್ಧವಾಗಿ ಕೊಡುವ ಶ್ರಾವಣದ ಬಗೆಗೆ ಅವರಿಗೆ ಉತ್ಕಟ ಪ್ರೀತಿ ಇರುವುದು ಅತ್ಯಂತ ಸಹಜ. ನೀರಿಗೆ 'ಜೀವನ' ಎಂಬ ಪರ್ಯಾಯ ಪದವಿದೆ. ನೆಲದಿಂದ ಮುಗಿಲಿಗೇರಿ, ಮತ್ತೆ ಮುಗಿಲಿಂದ ನೆಲಕ್ಕೆ ಸುರಿಯುವ 'ಜಲಚಕ್ರ'ದ ನಿರಂತರ ಚಲನೆಯಿಂದಾಗಿಯೇ ಈ ಭೂಮಿಯ ಮೇಲಿರುವ ಜೀವನಯಂತ್ರ ಕೆಲಸ ಮಾಡುವುದೆಂಬುದು ಎಲ್ಲರಿಗೂ ತಿಳಿದ ಸಂಗತಿ. ಭೂಮಿಯ ಮೇಲಿರುವ ಬದುಕು ಸ್ಥಗಿತಗೊಳ್ಳದೇ ಶುಚಿ ಪೂರ್ಣವಾಗಿ ಚಲನ ಶೀಲವಾಗಿರಬೇಕಾದರೆ, ದೇವಗಂಗೆಯೇ ಅವತರಿಸಬೇಕೆಂಬ ಬೇಂದ್ರೆಯವರ ಆಶಯ ಅವರ ಪ್ರಸಿದ್ಧ ಕವಿತೆ 'ಗಂಗಾವತರಣ'ದಲ್ಲಿ ಕಾಣಿಸಿಕೊಂಡಿದೆ, ಶಿವಶುಭ್ರ ಕರುಣೆಯೂ ವಾತ್ಸಲ್ಯವರಣೆಯೂ ಆದ ಗಂಗೆಯನ್ನು ಅವರು '...ಕೊಳೆಯ ತೊಳೆವವರು ಇಲ್ಲ, ಬಾ... ಸತ್ತ ಜನರನ್ನು ಎತ್ತೆ, ಬಾ...' ಎಂದೆಲ್ಲಾ ಪ್ರಾರ್ಥಿಸಿದ್ದಾರೆ, ಆದ್ದರಿಂದಲೇ ಬದುಕನ್ನು ಶುಚಿಗೊಳಿಸಿ, ಚೈತನ್ಯವನ್ನು ಉದ್ದೀಪಿಸುವ ಮಳೆಯನ್ನು ಭೂಮಿಗೆ ಸಮೃದ್ಧವಾಗಿ ನೀಡುವ ಶ್ರಾವಣವೆಂದರೆ ಬೇಂದ್ರೆಯವರಿಗೆ ಎಲ್ಲಿಲ್ಲದ ಪ್ರೀತಿ.

ಬೇಂದ್ರೆಯವರ ಶ್ರಾವಣ ಪ್ರೀತಿ ಅವರ ಅನೇಕ 'ಶ್ರಾವಣ ಗೀತೆ'ಗಳಲ್ಲಿ ಬೇರೆ ಬೇರೆ ಆಕೃತಿಗಳಲ್ಲಿ ಕಾಣಿಸಿಕೊಂಡಿದೆ. 'ಶ್ರಾವಣ ಮಾಸದ ಮಳೆ ಬಿಸಿಲು ಜೀವನ ತತ್ತ್ವವನ್ನೇ ಬಿಂಬಿಸುವ ಜೀವನ ಚಕ್ರವನ್ನು ತಿರುಗಿಸುತ್ತಲಿದೆ' ಎಂಬ ನಂಬಿಕೆ ಅವರದು. ಬೇಂದ್ರೆಯವರ ಶ್ರಾವಣ ಪ್ರೀತಿಯ ಹಿನ್ನೆಲೆಯಲ್ಲಿ ನಿಸರ್ಗ ಪ್ರೀತಿಯಷ್ಟೆ ಅಲ್ಲ, ಅವರ ವೈಯಕ್ತಿಕ ಬದುಕಿನ ಘಟನೆಗಳಿವೆ; ಪೌರಾಣಿಕ ಚಾರಿತ್ರಿಕ ಸಂಗತಿಗಳ ಸ್ಮೃತಿಗಳಿವೆ; ಅನುಭಾವದ ಮಿಡಿತವೂ ಇದೆ. ಬೇಂದ್ರೆಯವರದು ಶ್ರಾವಣ ನಕ್ಷತ್ರ. ಅವರ ಪತ್ನಿ ಹಾಗೂ ಅವರಿಗೆ ಅತ್ಯಂತ ಆತ್ಮೀಯರಾಗಿದ್ದ ಹಲವರು ತೀರಿಕೊಂಡುದು ಶ್ರಾವಣ ಮಾಸದಲ್ಲಿ. ಹೀಗಾಗಿ ಬೇಂದ್ರೆಯವರ ಸ್ವಂತ ಬದುಕಿನಲ್ಲಿ ಶ್ರಾವಣ ಒಂದು ಮರೆಯಲಾಗದ ಮಾಸ. ಅಲ್ಲದೆ ಶ್ರೀಕೃಷ್ಣನ ಜನನ, ಮಹರ್ಷಿ ಅರವಿಂದರ ಜನನ, ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿ– ಈ ಎಲ್ಲವೂ ಶ್ರಾವಣದಲ್ಲೇ ಘಟಿಸಿರುವುದರಿಂದ ಸಾಂಸ್ಕೃತಿಕವಾಗಿಯೂ ಬೇಂದ್ರೆಯವರಿಗೆ ಈ ಮಾಸ ಪ್ರಿಯವೆನ್ನಿಸಿದೆ. 'ಬಂದಿಕಾರ ಶ್ರಾವಣಾ' ಎಂಬ ಕವಿತೆಯಲ್ಲಿ ಅವರು ಶ್ರಾವಣ ಮಾಸದ ಸಾಂಸ್ಕೃತಿಕ ಮಹತ್ವವನ್ನು ಅನುಸಂಧಾನ ಮಾಡಿದ್ದಾರೆ.

ಶ್ರಾವಣದ ಕುರಿತು ಬೇಂದ್ರೆಯವರ ಉತ್ಕಟ ಉತ್ಸಾಹವನ್ನು ನೋಡಬೇಕಾದರೆ ಅವರ 'ಶ್ರಾವಣ ಬಂತು ನಾಡಿಗೆ... ಬಂತು ಕಾಡಿಗೆ...' ಎಂದೆಲ್ಲಾ ಘೋಷಿಸುವ ಕವಿತೆಯನ್ನು ಓದಬೇಕು; ಗಾಯಕ ಅಶ್ವತ್ಥರಂಥವರ ಧ್ವನಿಯಲ್ಲಿ ಕೇಳಬೇಕು! 'ಶ್ರಾವಣದ ಗಾಳಿ ಭೈರವನ ರೂಪತಾಳಿ ಕಡಲಿನ ಮೇಲೆ ಕುಣಿಯುತ್ತದೆ; ಶ್ರಾವಣದ ಮೋಡಗಳು ಸ್ಥಾವರ ಲಿಂಗಗಳಂತಿರುವ ಗುಡ್ಡಗಳಿಗೆ ಅಭ್ಯಂಜನ ಮಾಡಿಸುತ್ತವೆ' –ಎಂದೆಲ್ಲಾ ವರ್ಣಿಸುವ ಬೇಂದ್ರೆಯವರು ಶ್ರಾವಣಮಾಸದ ಸಕಲ ಮುಖಗಳನ್ನು ಅತ್ಯಂತ ತನ್ಮಯತೆಯಿಂದ ನಮ್ಮ ಮುಂದೆ ತೆರೆದಿಟ್ಟಿದ್ದಾರೆ. ಇನ್ನೊಂದು ಕಡೆ '...ನೆಲ ಹಸಿರು ಹೊಲ ಹಸಿರು ಗಿಡ ಗಂಟೆ ಹಸಿರು; ಫಲವೇನೋ...?' ಎಂಬ ನಿರಾಶೆಯ ನಿಟ್ಟುಸಿರನ್ನು ಅವರು ಹೊರಹಾಕಿದ್ದಾರೆ, ಈ ಶ್ರಾವಣ' ನಮ್ಮ ಪಾಲಿಗೆ ಉತ್ಸಾಹವನ್ನು ತರಲಿದೆಯೋ, ನಿರಾಶೆಯನ್ನೋ– ಕಾದು ನೋಡಬೇಕಲ್ಲವೆ?

■ ವೈನತೇಯ

## ಮಾತೇ ಮುತ್ತು

★ ಕಡಿಮೆ ಶಕ್ತಿಯುಳ್ಳ ಅನೇಕ ವಸ್ತುಗಳು ಒಂದುಗೂಡಿದಾಗ ಅದನ್ನು ಗೆಲ್ಲುವುದು ಅಶಕ್ಯವಾಗುತ್ತದೆ. ಹುಲ್ಲುಗಳಿಂದ ಹೊಸೆಯಲ್ಪಟ್ಟ ಹಗ್ಗದಿಂದ ಆನೆಯೂ ಕೂಡ ಕಟ್ಟಲ್ಪಡುತ್ತದೆ.

–ಪಂಚತಂತ್ರ

★ ಹಾವಿಗೆ ಹಾಲೆರೆಯುವುದು ಬರಿಯ ವಿಷವನ್ನು ಹೆಚ್ಚು ಮಾಡಿದಂತೆ ಆಗುತ್ತದೆ. ಹಾಗೆಯೇ ಮೂರ್ಖರಿಗೆ ಮಾಡಿದ ಉಪದೇಶವೂ ಸಹ. ಇದರಿಂದ ಇನ್ನೂ ಹೆಚ್ಚು ಕೆರಳುವುದೇ ವಿನಾ ಶಾಂತವಾಗುವುದಿಲ್ಲ.

–ಹಿತೋಪದೇಶ

★ ವೈಯಕ್ತಿಕ ಹಿತಸಾಧನೆ ಮುಖ್ಯವಾದಾಗ ತತ್ವ ಆದರ್ಶ ಇರುವುದಿಲ್ಲ, ಇದ್ದರೂ ಗಾಳಿಗೆ ತೂರಲ್ಪಡುತ್ತವೆ.

–ಅನುಭವಾಮೃತ

★ ಯೌವನದ ಪ್ರೇಮ ಬೆಳ್ಳಿಯ ಮೊಗ್ಗು; ಪ್ರಬುದ್ಧ ಪ್ರೇಮ ಬಂಗಾರದ ಹೂ.

–ಜಪಾನಿ ಗಾದೆ

★ ಲೋಕದಲ್ಲಿಯ ಕಾಮಸುಖ ದೇವಲೋಕದ ಮಹಾಸುಖ –ಇವೆರಡೂ ಆಸೆಯನ್ನು ಬಿಡುವುದರಿಂದ ಉಂಟಾಗುವ ಸುಖದ ಹದಿನಾರನೆಯ ಒಂದಂಶವೂ ಇಲ್ಲ.

–ಮಹಾಭಾರತ

★ ಪುಸ್ತಕಗಳು ನಮ್ಮ ದಾರಿ; ನಮ್ಮ ಬೆಳಕು. ನಮಗೆ ಅವು ಗುರಿ ತೋರಿಸುತ್ತವೆ; ನಮ್ಮ ಅನುಭವಗಳನ್ನು ವಿಸ್ತಾರಗೊಳಿಸುತ್ತವೆ; ಆಲೋಚನೆಗಳನ್ನು ಒರೆಗೆ ಹಚ್ಚುತ್ತವೆ. ಜ್ಞಾನವೇ? ಮನರಂಜನೆಯೇ? ಅಧ್ಯಾತ್ಮವೇ? ಯಾವುದು ಬೇಕು ಹೇಳಿ ನಿಮಗೆ? ಅವೆಲ್ಲವೂ ಪುಸ್ತಕಗಳನ್ನು ಓದುವದರಿಂದ ಸಿಗುತ್ತವೆ.

–ಹಾ.ಮಾ.ನಾಯಕ

★ ಹಣ ಇಲ್ಲದೆ 'ಪ್ರೇಮ' ಎಂದುಕೊಂಡು ಮದುವೆ ಆದವರಿಗೆ ಸುಖದ ರಾತ್ರಿಗಳು, ದುಃಖದ ಹಗಲು ಕಾದಿವೆ.

–ಇಟಲಿ ಗಾದೆ

★ ಅದ್ಭುತ, ಸಂತೋಷಕರ ಎನ್ನುವ ಪ್ರೇಮ ಸಹ ಅದರದೇ ಆದ ನೋವನ್ನೊಳಗೊಂಡಿರುತ್ತದೆ.

–ಆರ್.ಎನ್.ಆಲ್ಬಿನ್

★ 'ಬಹು ಸಂಖ್ಯಾತರ ಅಧಿಕತಮ ಶ್ರೇಯಸ್ಸು' ಎಂಬ ಸಿದ್ಧಾಂತ ಮಾನವ ಕುಲಕ್ಕೆ ಕೇಡು ಮಾಡಿದೆ. ಸರ್ವರ ಅತ್ಯಧಿಕ ಶ್ರೇಯಸ್ಸೇ ಮಾನವೀಯ ಸಿದ್ಧಾಂತ.

–ಮಹಾತ್ಮ ಗಾಂಧೀಜಿ

★ ಅನ್ಯರನು ಹಾಳುಮಾಡದೆ, ತನ್ನ ತಾನಾಳಿದರೆ ಅದೇ ಬಿಡುಗಡೆ.

–ದ.ರಾ.ಬೇಂದ್ರೆ

★ ಬುದ್ಧಿವಾದ ಅನೇಕರಿಗೆ ದೊರೆಯುತ್ತದೆ. ಆದರೆ ಅದರ ಪ್ರಯೋಜನ ಪಡೆಯುವವರು ಅಪರೂಪ.

–ಪಬ್ಲಿಯಸ್ ಸೈರಸ್

★ ನಿಧಾನವಾಗಿ ಹೋದಷ್ಟೂ ಮುಂದೆ ಹೋಗುತ್ತೀಯೆ.

–ರಷ್ಯಾ ಗಾದೆ